**ಎಸ್.ಸಿ.ಸಂಖ್ಯೆ:10035/2025**
**ಪ್ರಾ.ಸಾ.ಸಂಖ್ಯೆ: 7**
**ಚಾ.ಸಾ.ಸಂಖ್ಯೆ: 15**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿ: ಮುಧೋಳ</u>**

**ಎಸ್.ಸಿ.ಸಂಖ್ಯೆ: 10035/2025**

| | |
|---|---|
| ಹೆಸರು: | ಲಕ್ಷ್ಮಣ ಅಗಸಿಮನಿ |
| ತಂದೆಯ ಹೆಸರು: | ಬೆನ್ನಪ್ಪ |
| ವಯಸ್ಸು: | **65** ವರ್ಷ |
| ಉದ್ಯೋಗ: | ಒಕ್ಕಲುತನ |
| ವಾಸ: | ಮಂಟೂರ |

**ಸಾಕ್ಷಿಯನ್ನು ದಿ: 19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:-</u>**

**1.** ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ನನಗೆ ಚಾಸಾ-**6** ಕರಿಯಪ್ಪ ಹಾಗೂ ಅವರ ಕುಟುಂಬದವರ ಪರಿಚಯವಿದೆ. ಸುಮಾರು ಎರಡು ವರ್ಷಗಳ ಹಿಂದೆ ಚಾಸಾ-**1** ನ್ಯಾಯಾಲಯದ ಮುಂದಿರುವ **1** ನೇ ಆರೋಪಿ ಚೇತನ ಈತನನ್ನು ಪ್ರೀತಿ ಮಾಡುತ್ತಿದ್ದಳು. ಅವರಿಬ್ಬರ ಜಾತಿ ಬೇರೆ ಬೇರೆ ಇರುವುದರಿಂದ ಅದನ್ನು ನಿಲ್ಲಿಸಬೇಕೆಂದು ಅಂತ ನಾನು ಹಿರಿಯರಾದ ಶ್ರೀಶೈಲ್ ಹಂಚನಾಳ, ಸಂತೋಷ ಅಗಸಿಮನಿ, ಮಧ್ಯಸ್ಥಿಕೆ ವಹಿಸಿ ಹೇಳಿದ್ವೆವು. ಆದರೂ ಸಹ ಆರೋಪಿ ಚಾಸಾ-**1** ಇವಳನ್ನು ಒತ್ತಾಯಿಸುವುದನ್ನು ಮುಂದುವರೆಸಿದ್ದ.

**2.** ಕಲ್ಲು ಒಗೆದ ಘಟನೆಯಾಗುವ ಒಂದು ತಿಂಗಳ ಮೊದಲು ಆರೋಪಿ ನಂ. **1** ಚಾಸಾ-**6** ಇವರ ಮನೆಯ ಬಾಗಿಲಿಗೆ ಬೆಂಕಿ ಹಚ್ಚಿದ್ದ. ಆ ಬಗ್ಗೆ ಚಾಸಾ-**6** ಕರಿಯಪ್ಪ ನಮಗೆ ಹೇಳಿದ್ದರು. ಅದಾದ ಒಂದು ತಿಂಗಳ ನಂತರ ಕಲ್ಲು ಒಗೆದ ಘಟನೆಯಾಗಿತ್ತು. ಮರುದಿನ ಪೊಲೀಸರು ಬಂದಿದ್ದರು. ಅಲ್ಲಿ ನಮ್ಮನ್ನು ವಿಚಾರ ಮಾಡಿದರು. ನಾನು ಈ ಮೊದಲು ಅವರ ವ್ಯವಹಾರದಲ್ಲಿ ಹಿರಿಯತನ ಮಾಡಿದ ಬಗ್ಗೆ ಹೇಳಿದೆ.

**<u>ಪಾಟಿಸವಾಲು: 1 & 2 ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದ:</u>**

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 7**
**ಚಾ.ಸಾ.ಸಂಖ್ಯೆಃ 15**

**1.** ಕಲ್ಲು ಒಗೆಯುವ ಘಟನೆಯ ಮೊದಲೇ ನಾಲ್ಕು ಮಂದಿ ಹಿರಿಯರು ಹೇಳಿದ್ದೆವು. ಚಾಸಾ-6 ಕರಿಯಪ್ಪ ನಮ್ಮ ಜಾತಿಯವರೆ ಎಂದರೆ ಸರಿ. ನಮ್ಮ ಸಂಬಂಧಕರು ಎಂದರೆ ಸರಿಯಲ್ಲ. ಯಾವ ತಾರಿಖಿನಂದು ಕರಿಯಪ್ಪ ನಮಗೆ ಬಾಗಿಲಿಗೆ ಬೆಂಕಿ ಹಚ್ಚಿದ ವಿಷಯ ಹೇಳಿದ್ದ ಎಂದರೆ ಸರಿಯಲ್ಲ. ನಾಲ್ಕು ಜನ ಪೊಲೀಸರು ಬಂದಿದ್ದರು. ಅವರ ಹೆಸರನ್ನು ಹೇಳಲು ಬರುವುದಿಲ್ಲ. ಬಾಗಿಲು ಸುಟ್ಟ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಲ್ಲ. ಆ ಘಟನೆಯ ಬಗ್ಗೆ ಚಾಸಾ-6 ದೂರು ಸಲ್ಲಿಸಿಲ್ಲ. ಆರೋಪಿ ನಂ. 1 ಬಾಗಿಲು ಸುಟ್ಟಿದ್ದಾನೆಂಬ ಘಟನೆಯನ್ನು ನಾನು ನೋಡಿಲ್ಲ. ಈಗ ಕಲ್ಲು ಒಗೆದ ಘಟನೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

**<u>ಪಾಟಿಸವಾಲುಃ 3 ರಿಂದ 5ನೇ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:</u>**

**1.** ಚಾಸಾ-1 ಇವರ ಕುಟುಂಬ ನನಗೆ 10 ವರ್ಷದಿಂದ ಪರಿಚಯ ಇರುತ್ತಾರೆ. ಈ ಪ್ರಕರಣದಲ್ಲಿ ಆಗಿವೆ ಅಂತ ಹೇಳುವ ಯಾವುದೇ ಘಟನೆಯನಜ್ನು ನಾನು ಪ್ರತ್ಯಕ್ಷ್ಯ ನೋಡಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**